ತುಳಸಿ ಇಷ್ಟವಾಗತೊಡಗಿದರು. ಜೀವನ್ಮರಣದ ಪ್ರಶ್ನೆ, ಮುಕ್ತಿಯ ಪ್ರಶ್ನೆ, ಅಸ್ತಿತ್ವದ ಪ್ರಶ್ನೆ, ಸಕಲ ಚರಾಚರಗಳ ಪ್ರಶ್ನೆ ಹೀಗೆ ಅವರ ಕಾವ್ಯ ವಿಸ್ತಾರವಾದದ್ದು. ಆಮೇಲೆ ಕಾಳಿದಾಸ, ಭವಭೂತಿ ಇತ್ಯಾದಿ. ತದನಂತರ ರಾಮಾಯಣ ಮತ್ತು ಮಹಾಭಾರತ. ವಾಲ್ಮೀಕಿ ಮತ್ತು ವ್ಯಾಸ ಇವರು ಇಲ್ಲಿನ ಜೀವನದ ಗಹನತೆಯನ್ನು ತಪಸ್ಸಿನಂತೆ ಹುಡುಕಿದರು. ಇವರನ್ನು ಓದುತ್ತಿದ್ದರೆ ಎಲ್ಲಾ ಸೀಮೆಗಳು ಕೂಡ ಅಳಿಸಿಹೋದಂಥ ಅನುಭವವಾಗುವುದು. ನಮ್ಮ ಜೀವನದ ಸಾವಿರಾರು ಸಂಗತಿಗಳನ್ನು ಏಕತ್ರವಾಗಿ ಪೋಣಿಸಿದರು. ಅವರ ನೇಯ್ಗೆಗೆ ಅಪಾರವಾದ ಶಕ್ತಿಯಿದೆ. ಯಾರ ಕಾವ್ಯ ತನ್ನ ಕೈಗಳನ್ನು ಅಗಲಿಸಿ ಇಡೀ ವಿಶ್ವವನ್ನು ತಬ್ಬಿಕೊಳ್ಳಲು ಯತ್ನಿಸುತ್ತದೆಯೊ ಆ ಕಾವ್ಯ ನನಗಿಷ್ಟ. ಮೊದಲು ಕಚ್ಚಾ ರಸ್ತೆ ಇರುತ್ತದೆ. ನಂತರ ಅದರ ಮೇಲೆ ಮಣ್ಣು ಸುರಿಸಿ ಸಪಾಟಾಗಿಸುತ್ತಾರೆ. ಆಮೇಲೆ ಡಾಂಬರು. ಇದು ಸಾಕಾಯಿತು ಸಿಮೆಂಟ್ ರಸ್ತೆ. ನಮ್ಮ ಕಣ್ಣಿಗೆ ಈಗಿರುವ ರಸ್ತೆ ಮಾತ್ರ ಕಾಣಿಸುತ್ತದೆ. ಆದರೆ ಇದರ ಕೆಳಗೆ ಹಲವು ರಸ್ತೆಗಳಿವೆ. ನಾನೊಂದು ತರಹ ತಿರುಬೋಕಿ. ಕಾವ್ಯದ ಅನಂತ ರಸ್ತೆಗಳಲ್ಲಿ, ಸ್ಮೃತಿಗಳಲ್ಲಿ ತಿರುಗುತ್ತಲೇ ಇರುವೆ.

◆ **ಹಿಂದಿಯಲ್ಲಿ ಹಳೆಯ ಕವಿಗಳನ್ನು ಗಮನಿಸಿದರೆ ಹೊಸ ಕವಿಗಳ ಭಾಷೆ ಮತ್ತು ಅದರ ಸಾಧ್ಯತೆಗಳ ಬಗ್ಗೆ ಏನನ್ನಿಸುತ್ತದೆ? ಅವರ ಭಾಷಿಕ ವ್ಯಾಪ್ತಿ ಮತ್ತು ಪರಿಣಾಮಗಳು ಹೇಗಿದ್ದವು?**

ಭಾಷೆಯಲ್ಲಿ ಹಿಂದಿನವರ ಸತ್ವಪೂರ್ಣತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ ಹೊಸ ಕವಿಗಳನ್ನು ಇನ್ನೂ ಕೆಲ ದಶಕಗಳ ನಂತರ ನೋಡಿದರೆ ಅವರ ಸಾಮರ್ಥ್ಯ ಇನ್ನೊಂದು ತರಹದಲ್ಲಿ ಅರಿವಿಗೆ ಬರಬಹುದು. ತುಳಸಿದಾಸರು ತಮ್ಮ 'ರಾಮಚರಿತ ಮಾನಸ'ದ ಮೊದಲು ನುಡಿಗಳಲ್ಲಿ ದುಷ್ಟರಿಗೆ ವಂದಿಸಿದ್ದಾರೆ. ನಂತರ ಭವಿಷ್ಯದ ಕವಿಗಳಿಗೆ ವಂದಿಸಿದ್ದಾರೆ. ಹಿಂದಿನವರು ದೊಡ್ಡ ಕವಿಗಳು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ನಂತರದಲ್ಲೂ ಕವಿಗಳು ಹುಟ್ಟುತ್ತಲೇ ಇರುತ್ತಾರೆ. ಇದೊಂದು ತರಹ ಸರಣಿ. ಪಶ್ಚಿಮದಲ್ಲಿ ಹೋಮರ್, ಡಾಂಟೆ, ವರ್ಜಿಲ್ ದೊಡ್ಡ ಕವಿಗಳು ನಿಜ. ನಂತರದಲ್ಲೂ ನೂರಾರು ಕವಿಗಳು ಬಂದರು. ಶೇಕ್ಸ್‌ಪಿಯರ್, ವರ್ಡ್ಸ್‌ವರ್ಥ್, ಏಟ್ಸ್, ಎಲಿಯೆಟ್ ಎಲ್ಲರೂ ಬಂದರಲ್ಲ. ಎಲ್ಲಾ ಭಾಷೆಗಳಲ್ಲೂ ಹೀಗಾಗುತ್ತದೆ. ಆದರೆ ಇಂಡಿಯಾದೊಳಗೆ ಇಂಗ್ಲಿಷ್‌ನ ಹೊಸ ಕವಿಗಳನ್ನು ಗುರುತಿಸುವ ಕ್ರಮವೇ ನನಗೆ ಇಷ್ಟವಾಗುವುದಿಲ್ಲ. ಜೀತ್ ತಾಯಿಲ್, ಕೆಕೆಎನ್ ದಾರುವಾಲಾ, ಅರುಂಧತಿ ಸುಬ್ರಹ್ಮಣ್ಯ ಇತ್ಯಾದಿ. ಇವರೆಲ್ಲಾ ಸಾಧಾರಣ ಕವಿಗಳು. ಭಾರತದ ವಿವಿಧ ಭಾಷೆಗಳಲ್ಲಿ ಇವರಿಗಿಂತ ಉತ್ತಮ ಕವಿಗಳು ನೂರಾರು ಸಂಖ್ಯೆಯಲ್ಲಿದ್ದಾರೆ. ಅಲ್ಲಿ ಕವಿ ಎಂದರೆ ಕಾನ್ವೆಂಟ್‌ನಲ್ಲಿ ಕಲಿತ ಇಂಗ್ಲಿಷನ್ನು ನಿರರ್ಗಳವಾಗಿ ಮಾತಾಡುವವರು. ಒಂದೆರಡು ಲಿಟರರಿ ಫೆಸ್ಟ್‌ನಲ್ಲಿ ಭಾಗವಹಿಸಿದರೆ ಸಾಕು, ನೀವು ಕವಿ. ಹಣ, ವ್ಯವಹಾರ, ಜಾಹೀರಾತು, ಉದ್ಯಮ, ಇವೆಲ್ಲಾ ಲೇಖಕರನ್ನು ಗುರುತಿಸುವ ಗುತ್ತಿಗೆ ಪಡೆದಿವೆ. ಇಂಗ್ಲಿಷ್ ವಿಭಾಗದ ದುರಂತವೆಂದರೆ ನೀವು ಒಂದು ಕಡೆ ಶೇಕ್ಸ್‌ಪಿಯರ್, ಎಲಿಯೆಟ್, ಏಟ್ಸ್, ನೆರೂಡಾ ಇವರನ್ನು ಓದಬೇಕು. ಇನ್ನೊಂದೆಡೆ ಮೇಲಿನ ತರಹದ ಸಾಧಾರಣ ಕವಿಗಳನ್ನು ಓದಬೇಕು. ಹಾಗಾದಾಗ ನಮ್ಮ ಕಾವ್ಯಪ್ರಜ್ಞೆಯೇ ಮೊಂಡಾಗುತ್ತದೆ. ಆದರೆ ಇದನ್ನು ಯಾರಿಗೆ ಹೇಳುವುದು? ಜೊತೆಗೆ ಥಿಯರಿಗಳನ್ನು ತುಂಬಾ ಹೇಳುತ್ತಾರೆ. ಅವೆಲ್ಲಾ ಕೂಡ ನೇಮ್ ಡ್ರಾಪಿಂಗ್ ತರಹ ಇವೆ. ಅಂದರೆ ಸುಮ್ಮನೆ ಉಚ್ಚರಿಸುವುದು. ಲಿಟರರಿ ಕ್ರಿಟಿಸಿಸಂ ಪೂರ್ಣವಾಗಿ ಅಲ್ಲಿ ನಾಶವಾಗಿಬಿಟ್ಟಿದೆ. ನನಗೆ ವಿಭಾಗದಲ್ಲಿ ಯಾರೂ ಸ್ನೇಹಿತರಿರಲಿಲ್ಲ. ಅಲ್ಲಿ ಯಾರೊಂದಿಗೂ ಸ್ನೇಹ ಮಾಡಲು ನನ್ನಂಥವನಿಗೆ ಸಾಧ್ಯವೇ ಇರಲಿಲ್ಲ. ಸಾಹಿತ್ಯವೆಂದರೆ ಒಣ ವಾದ ಹೂಡುವವರೊಂದಿಗೆ ಏನು ಮಾತನಾಡುವಿರಿ? ನಿವೃತ್ತನಾದ ಮೇಲೆ ನಾನು ಒಂದು ಸಲವೂ ವಿಭಾಗಕ್ಕೆ ಹೋಗಲಿಲ್ಲ. ಕನ್ನಡ, ಹಿಂದಿ, ಬೆಂಗಾಲಿ, ಉರ್ದು – ಇಲ್ಲಿನ ಶ್ರೇಷ್ಠ ಕವಿಗಳನ್ನೂ ಇಂಗ್ಲಿಷ್ ವಿಭಾಗ ಓದುವಂತಾಗಬೇಕು. ಗಂಗೆ, ನರ್ಮದಾ, ಕಾವೇರಿ ಇಂಥ ಕವಿಗಳನ್ನು ಬಿಟ್ಟು ಕೊಡದಲ್ಲಿ ನೀರು ತುಂಬಿಕೊಂಡು ಓಡಾಡುವ ಕವಿಗಳನ್ನು ಓದುತ್ತಿದ್ದೇವೆ. ಗಂಗೆಯಲ್ಲಿ ಈಜಾಡಿದವರಿಗೆ ಕೊಡದಲ್ಲಿ ಈಜಾಡಿ ಎಂದರೆ ಹೇಗೆ? ಇದಕ್ಕಿಂತ ದುರಂತವೆಂದರೆ ಕೊಡದ ನೀರನ್ನೇ ಗಂಗೆಯೆಂದು ತಿಳಿಯಿರಿ ಅಂತ ಮೊಂಡು ವಾದ ಬೇರೆ. ಸರ್ಕಾರಗಳು ಬದಲಾದಾಗಲೆಲ್ಲ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳು ಬದಲಾಗುವುದು ನಿಜಕ್ಕೂ